ಕೂಡ ಮಾಡುತ್ತಾರೆ. ಅದರಲ್ಲಿ ವಿಳಂಬವಾಗಿದೆ ಎಂದು ನಾನು ಹೇಳುವುದಿಲ್ಲ. ಬೆಳಿಗ್ಗೆ ಆದೇಶವಾಗುತ್ತದೆ, ಸಂಜೆ ಹಸ್ತಾಂತರ ಕೂಡ ಆಗುತ್ತದೆ. ಆದರೆ ನನ್ನ ಪ್ರಶ್ನೆ ಏನೆಂದರೆ, ದಿನಾಂಕ 15.09.2005ರಂದು ಏನು ಸರ್ಕಾರಿ ಆದೇಶವಾಗಿದೆ, ಆ ಆದೇಶ ಇದುವರೆಗೂ ಕೂಡ ಜಾರಿಯಾಗಿಲ್ಲ. ಇದರಲ್ಲಿ ಬಹಳ ವಿಳಂಬವಾಗಿದೆ. ನಾನು ಈಗಾಗಲೇ ಹೇಳಿದಂತೆ, ಕೆಲವು ಐ.ಎ.ಎಸ್ ಅಧಿಕಾರಿಗಳು ಏನು ಇರುತ್ತಾರೋ, ಅವರೇ ಮಹಾ ಬುದ್ದಿವಂತರು ಎನ್ನತಕ್ಕಂಥ ಭಾವನೆ ಇದರಲ್ಲಿ ಬಂದು, ಒಂದು ಸಹಕಾರಿ ಸಂಸ್ಥೆಗೆ ತೊಂದರೆ ಮಾಡಿರತಕ್ಕಂಥದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಚಿವರ ಉತ್ತರದ ಕಡೇ ಪ್ಯಾರಾದಲ್ಲಿ ತ್ವರಿತವಾಗಿ ಲೆಕ್ಕಪತ್ರಗಳ returns file ಮಾಡಬೇಕೆಂದು ಏನು ಹೇಳುತ್ತಿದ್ದಾರೆ, ಅದು ಕೂಡಲೇ ಆಗಬೇಕಾಗಿದೆ. ಇದರ ಅನ್ವಯ ಏನು ಈಗಾಗಲೇ ಸಾಕಷ್ಟು

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿಳಂಬವಾಗಿದೆ, ಮತ್ತೆ ಆ ವಿಳಂಬವನ್ನು ತಪ್ಪಿಸಲಿಕ್ಕೆ ಸಂಬಂಧಪಟ್ಟಂತಹ ಮಾನ್ಯ ಸಚಿವರು, ಆ ಒಂದು ಸಾರ್ವಜನಿಕ ಉದ್ದಿಮೆ ಇಲಾಖೆಯ ಅಧಿಕಾರಿಗಳು ಮತ್ತು ಆ ಒಂದು ಸಹಕಾರಿ ಸಂಸ್ಥೆಯ ಪದಾಧಿಕಾರಿಗಳನ್ನು ಕರೆಸಿ, ಆದಷ್ಟು ಜಾಗ್ರತೆ ಒಂದು ಸಭೆಯನ್ನು ನಡೆಸಿ, ಮತ್ತೆ ವಿಳಂಬವಾಗುವುದನ್ನು ತಪ್ಪಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ವಿಳಂಬಕ್ಕೆ ಈ ತರಹದ ಧೋರಣೆಗಳೇ ಕಾರಣವಾಗಿವೆ. ನಾನು ಖಂಡಿತವಾಗಿಯೂ ಕೂಡ ಸಂಬಂಧಪಟ್ಟಂತಹ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ, ಸಾರ್ವಜನಿಕ ಉದ್ದಿಮೆಗಳ ಸಂಸ್ಥೆಯವರು ಕೂಡಲೇ ಬಗೆಹರಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬಯಸುತ್ತೇನೆ.

9. ಪ್ರಕಟಣೆ

ವಿಷಯ: ಶ್ರೀ ಸಿದ್ದರಾಮಯ್ಯನವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ದಿನಾಂಕ 18.7.06ರಂದು ಅಂಗೀಕರಿಸಲಾಗಿದೆ.

ಅಧ್ಯಕ್ಷರು: ಈಗ ಬಂದು ಪ್ರಕಟಣೆ ಇದೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ 12ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಸಿದ್ದರಾಮಯ್ಯನವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಸದರಿ ರಾಜೀನಾಮೆಯನ್ನು ಈ ದಿನ, 18ನೇ ಜುಲೈ 2006ರಂದು ಅಂಗೀಕರಿಸಲಾಗಿದೆ.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಏನು ಚರ್ಚೆ ನಡೆದಿತ್ತು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಆರ್. ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಉಳಿದ ನಮ್ಮ ಗಮನ ಸೆಳೆಯುವ ಸೂಚನೆಗಳನ್ನು ತಾವು ನಾಳೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಇನ್ನೂ ಸ್ವಲ್ಪ ಗಮನ ಸೆಳೆಯುವ ಸೂಚನೆಗಳು ಉಳಿದಿದೆ. ಉಳಿದಿರುವ ಗಮನ ಸೆಳೆಯುವ ಸೂಚನೆಗಳನ್ನೆಲ್ಲಾ ನಾನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಎಷ್ಟು ಹೊತ್ತಿಗೆ ಉತ್ತರ ಕೊಡುತ್ತಾರೆ ಎಂಬುದು ಖಚಿತವಾಗಿ ಗೊತ್ತಿರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲ. Modestly ನೋಡಿ. If you can wait for some time. ಇಷ್ಟೊತ್ತಿಗೆ reply ಕೊಡುತ್ತಾರೆ ಎಂಬುದು ಮೊದಲೇ ನಿರ್ಧಾರವಾಗಿರಲಿಲ್ಲ. ಆ ರೀತಿಯ ಸೂಚನೆ ಇದ್ದಿದ್ದರೆ ನಾವು ಆ ಬಗ್ಗೆ ಅವರಿಗೆ ಹೇಳಬಹುದಾಗಿತ್ತು. ನೋಡಿ, I leave it to your wisdom. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲದಿರುವಾಗ ಉತ್ತರ ಕೊಡುವುದು ಸರಿಯೇ ಎಂಬುದನ್ನು ತಾವೇ ನೋಡಿ.

ಅಧ್ಯಕ್ಷರು: ಇವತ್ತು ಚರ್ಚೆಗೆ ಉತ್ತರ ಇದೆಯೇ ಎಂದು ನನ್ನನ್ನು ಕೇಳಿದಾಗ ನಾನು ಉತ್ತರ ಇವತ್ತೇ ಇದೆ, ಆದರೆ ಟೈಮ್ ಗೊತ್ತಿಲ್ಲವೆಂದು ಹೇಳಿದ್ದೆ.

ಶ್ರೀ ಡಿ.ಕೆ. ಶಿವಕುಮಾರ್: ಕೆಲವರು ಬೆಳಿಗ್ಗೆ ಉತ್ತರ ಅನ್ನುತ್ತಿದ್ದರು. ಈಗಲೇ ಉತ್ತರ ಕೊಡುತ್ತಾರಾ?

ಅಧ್ಯಕ್ಷರು: ಹೌದು, ಈಗಲೇ ಉತ್ತರ ಕೊಡುತ್ತಾರೆ. ಎಷ್ಟು ಗಂಟೆಗೆ ಎಂಬುದು ನನಗೆ ತಿಳಿಸಿಲ್ಲವೆಂದು ನಾನು ಅವರಿಗೆ ಹೇಳಿದ್ದೆ.